ಓ.ಎಸ್. 198/2017
ಪಿ.ಡಬ್ಲ್ಯೂ-1

ದಿನಾಂಕಃ **12.08.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ ಡಿ.ವಿ.ಎಸ್. ವಕೀಲರಿಂದಃ</u>

ಈ ದಾವೆಯನ್ನು ನಾವು ವಿಭಾಗಕ್ಕಾಗಿ ಹೂಡಿರುತ್ತೇವೆ. ಯಲ್ಲಪ್ಪ ತಂದೆ ವೆಂಕಟರವಣಪ್ಪ ನನ್ನ ದೊಡ್ಡಪ್ಪ. ಸದರಿ ಯಲ್ಲಪ್ಪನನ್ನು ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಮಗ. ದಾವಾ ಸ್ವತ್ತುಗಳು ಯಲ್ಲಪ್ಪ ತಂದೆ ವೆಂಕಟರವಣಪ್ಪನವರಿಗೆ ಸೇರಿದ್ದಂತ ಸ್ವತ್ತುಗಳಾಗಿದ್ದವು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿದಿದ್ದಾರೆ.

**2.** ಯಲ್ಲಪ್ಪ ತಂದೆ ವೆಂಕಟರವಣಪ್ಪನವರು ದಿಃ16.11.1977 ರಂದು ದಾವಾ 1 ನೇ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಯಲ್ಲಪ್ಪ ತಂದೆ ವೆಂಕಟರವಣಪ್ಪ ಮತ್ತು ಅವರ ಅಣ್ಣ-ತಮ್ಮಂದಿರು ಸುಮಾರು 50-60 ವರ್ಷಗಳ ಹಿಂದೆ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಯಲ್ಲಪ್ಪ ಮತ್ತು ಅವರ ಅಣ್ಣ-ತಮ್ಮಂದಿರು ಮಾಡಿಕೊಂಡಿದ್ದಂತಹ ಮೌಖಿಕ ವಿಭಾಗದಲ್ಲಿ ದಾವಾ 1 ನೇ ಆಸ್ತಿ ಯಲ್ಲಪ್ಪನವರ ಪಾಲಿಗೆ ಬಂದಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

**3.** ಯಲ್ಲಪ್ಪನವರು ಜೀವಂತವಾಗಿರುವವರೆಗೂ ಅವರ ಕಷ್ಟ-ಸುಖಗಳನ್ನು 1 ನೇ ಪ್ರತಿವಾದಿ ನೋಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 1 ನೇ ಪ್ರತಿವಾದಿ ಯಲ್ಲಪ್ಪನವರ ಕಷ್ಟ-ಸುಖಗಳನ್ನು ನೋಡಿಕೊಂಡಿದ್ದರಿಂದ ವಿಭಾಗದಲ್ಲಿ ಯಲ್ಲಪ್ಪನ ಪಾಲಿಗೆ ಬಂದಿದ್ದಂತಹ ದಾವಾ 1 ನೇ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**4.** ಯಲ್ಲಪ್ಪ 1 ನೇ ಪ್ರತಿವಾದಿಗೆ ದಾನ ಬರೆದುಕೊಟ್ಟಿರುವ ವಿಚಾರ ಸುಮಾರು 3 ವರ್ಷಗಳ ಹಿಂದೆ ನನಗೆ ಗೊತ್ತಾಗಿರುತ್ತದೆ. ದಾನ ಪತ್ರದ ಆಧಾರದ ಮೇಲೆ ದಾವಾ 1 ನೇ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ಮಾಡಿಕೊಂಡಿರುತ್ತಾರೆ ಎಂದು ನುಡಿದಿದ್ದಾರೆ. ದಾವಾ 1 ನೇ ಸ್ವತ್ತಿನ ಖಾತೆ ದಾನ ಪತ್ರದ ಆಧಾರದ ಮೇಲೆ 1977-78 ರಲ್ಲಿಯೇ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ 1 ನೇ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುವ ವಿಚಾರ ನನಗೆ ಸುಮಾರು 3 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಸದರಿ ಖಾತೆ ವರ್ಗಾವಣೆಯಾಗಿರುವುದನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

**5.** ನಮ್ಮ ಗ್ರಾಮದ ವೆಂಕಟರಾಮಯ್ಯನವರ ಪರಿಚಯ ನನಗೆ ಇರುತ್ತದೆ. ನನಗೆ ಮತ್ತು ಸದರಿ ವೆಂಕಟರಾಮಯ್ಯನವರಿಗೆ ಯಾವುದೇ ವೈಷಮ್ಯ ಇರುವುದಿಲ್ಲ. ಪತ್ರ ಬರಹಗಾರರಾದ ಶ್ರೀನಿವಾಸಪ್ಪನವರ ಪರಿಚಯ ನನಗೆ ಇರುವುದಿಲ್ಲ. ನಿಪಿ-1 ನ್ನು ಯಾರು ಯಾರಿಗೆ

ಬರೆದುಕೊಟ್ಟಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ದಾವಾ 1 ನೇ ಆಸ್ತಿಯನ್ನು ಹೊರತು ಪಡಿಸಿ ಬೇರೆ ಯಾವುದೇ ಸ್ವತ್ತಿನ ಖಾತೆ ನಿಮಗೆ ಜಂಟಿಯಾಗಿರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಎಲ್ಲಾ ನಮ್ಮ ದೊಡ್ಡಪ್ಪನವರ ಹೆಸರಿನಲ್ಲಿರುತ್ತದೆ ಎಂದು ಉತ್ತರಿಸಿರುತ್ತಾರೆ. ಯಲ್ಲಪ್ಪನವರು ತೀರಿಕೊಂಡ ನಂತರ ಅವರ ಹೆಸರಿನಲ್ಲಿದ್ದಂತಹ ಸ್ವತ್ತುಗಳ ಖಾತೆ ವರ್ಗಾವಣೆ ಮಾಡಿಕೊಳ್ಳಲು ನಾವು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಾವು ಮತ್ತು 5 ರಿಂದ 7 ನೇ ಪ್ರತಿವಾದಿಗಳು ಜಂಟಿ ಸ್ವಾಧೀನದಲ್ಲಿರುತ್ತೇವೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇರುವುದಿಲ್ಲ.

**6.** ನನ್ನ ವಾದ ಪತ್ರದಲ್ಲಿ ನಮೂದು ಮಾಡಿದಂತೆ ಯಾವುದೇ ಪಂಚಾಯ್ತಿ ಮಾಡಿರುವುದಿಲ್ಲ. ಯಲ್ಲಪ್ಪ ಮಾಡಿಕೊಟ್ಟಿರುವ ದಾನ ಪತ್ರದಂತೆ 1 ನೇ ಪ್ರತಿವಾದಿ ದಾವಾ 1 ನೇ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಸ್ವತ್ತುಗಳಲ್ಲಿ ಅವರು ಸ್ವಾಧೀನದಲ್ಲಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದಾವಾ 2 ರಿಂದ 4 ನೇ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ 2 ರಿಂದ 4 ನೇ ಆಸ್ತಿಗಳಲ್ಲಿ ನಮಗೆ ಯಾವುದೇ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಸಂಪೂರ್ಣ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**7.** ದಾವಾ ಸ್ವತ್ತುಗಳಲ್ಲಿ ನಮಗೆ ಮತ್ತು 5 ರಿಂದ 7 ನೇ ಪ್ರತಿವಾದಿಗಳಿಗೆ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾವು 1 ನೇ ಪ್ರತಿವಾದಿಗೆ ತೊಂದರೆ

ಕೊಡುವ ಉದ್ದೇಶದಿಂದ ನಾವು ಮತ್ತು 5 ರಿಂದ 7 ನೇ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ